**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5037/2023 ಪ್ರಾಸಾ-16
ಚಾಸಾ-20

ದಿನಾಂಕಃ 20-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಮನ್ಸೂರ್ |
| **ತಂದೆಯ / ಗಂಡನ ಹೆಸರು** | ರಫೀಕ್ |
| **ವಯಸ್ಸು** | 32 |
| **ಉದ್ಯೋಗ** | ಹಣ್ಣಿನ ವ್ಯಾಪಾರ |
| **ವಾಸಸ್ಥಳ** | ಪಾವಗಡ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ನಿಪಿ-5 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಒಂದು ವರೆ ವರ್ಷದ ಹಿಂದೆ ಪಾವಗಡ ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ನಾನು ಸಹಿ ಮಾಡಿರುತ್ತೇನೆ. ಒಬ್ಬ ಹೆಂಗಸಿನ ಸಾವು ಆಗಿದ್ದು ಅದರ ಬಗ್ಗೆ ನಾನು ಸಹಿ ಹಾಕಿರುತ್ತೇನೆ. ಶವವನ್ನು ನೋಡಿದಾಗ ತಲೆಯ ಹಿಂಭಾಗದಲ್ಲಿ ಗಾಯವಾಗಿತ್ತು, ಪೊಲೀಸರು ಪೊಟೋ ತೆಗೆದಿರುತ್ತಾರೆ. ಪೊಟೋ ನೋಡಿದರೆ ಗುರುತಿಸುತ್ತೇನೆ. ನಿಪಿ-6 ರಿಂದ 8 ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-6 ರ ಪೊಟೋದಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ಯಾವ ಕಾರಣಕ್ಕೆ ಲಕ್ಷ್ಮೀಯ ಸಾವು ಆಗಿರುತ್ತದೆ ಮತ್ತು ಅವಳ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ದಿ. 16.08.2023 ರಂದು ಬೆಳಿಗ್ಗೆ 10-00 ರಿಂದ 1-00 ಗಂಟೆಯವರೆಗೂ ಪಾವಗಡ ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ಮೃತ ಲಕ್ಷ್ಮೀ ಶವದ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ನಿಜ. ಮೃತ ಲಕ್ಷ್ಮೀಯ ಗಂಡ ಹೊಡೆದು ಸಾಯಿಸಿರುತ್ತಾನೆಂದು ಗೊತ್ತಾಯಿತು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಲಕ್ಷ್ಮೀ ರವರ ಸಂಬಧಿಕರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಆಗ ನನಗೆ ಲಕ್ಷ್ಮೀ ಸಾವು ಹೇಗೆ ಸಂಭವಿಸಿರುತ್ತದೆ ಎಂದು ಗೊತ್ತಾಯಿತ ಎಂದರೆ ಸರಿಯಲ್ಲ. ಆರೋಪಿಯ ಸಂಬಂಧಿಕರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು . ಆರೋಪಿ ಪರ ಶ್ರೀ ಪಿ.ಎನ್.ಆರ್. ವಕೀಲರಿಂದ**

ನಿಪಿ-5 ಕ್ಕೆ ಪೊಲೀಸರ ಹೇಳಿಕೆ ಮೇರೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ನಿಪಿ-5 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎನ್ನುವುದು ನಿಜ.

**ಮರು ವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**